# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025.

**ನ್ಯಾಕ್ 'ಎ' ಶ್ರೇಣಿ ಮಾನ್ಯತೆ**

ದೂರವಾಣಿ ಸಂಖ್ಯೆ : 0836-2222392
ಫ್ಯಾಕ್ಸ್ : 0836-2223392

ಜಾಲತಾಣ : www.kslu.karnataka.gov.in
ಇ-ಮೇಲ್: kslu.registrar@gmail.com


ಸಂಖ್ಯೆ: ಕರಾಕಾವಿ/ಆಡಳಿತ/ಉ.ಗೃ.ಟೆಂ./2022-23/1603

ದಿನಾಂಕ: 27/03/2023

## ದರಸೂಚಿ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ ಇದರ ಆವರಣದಲ್ಲಿರುವ ಉಪಹಾರ ಗೃಹವನ್ನು ಒಂದು ವರ್ಷದ ಅವಧಿಗೆ ನಡೆಸಿಕೊಂಡು ಹೋಗಲು ವ್ಯಕ್ತಿ/ಹೊಟೇಲ್/ಫರ್ಮಗಳಿಂದ ದರಸೂಚಿಗಳನ್ನು ದಿನಾಂಕ: 11-04-2023 ರ ಸಾಯಂಕಾಲ 4.00 ಗಂಟೆಯವರೆಗೆ ಮಾತ್ರ ಆಹ್ವಾನಿಸಲಾಗಿದೆ. ಕಾರಣ, ಆಸಕ್ತ ವ್ಯಕ್ತಿ/ಹೊಟೇಲ್/ಫರ್ಮಗಳು ತಮ್ಮ ದರಸೂಚಿಯನ್ನು ಸದರಿ ದಿನಾಂಕದೊಳಗಾಗಿ ವಿಶ್ವವಿದ್ಯಾಲಯದ ಕುಲಸಚಿವರ ಪದನಾಮದಲ್ಲಿ ಮೊಹರಬಂದ್ ಲಕೋಟೆಯಲ್ಲಿ ನೀಡಲು ಕೋರಿದೆ.

ಷರತ್ತು ಹಾಗೂ ಇತರೇ ವಿವರಗಳಿಗಾಗಿ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಅಥವಾ ಈ ಕಛೇರಿಗೆ ಭೇಟಿ ನೀಡಿ ಮತ್ತು ದೂರವಾಣಿ ಮೂಲಕ ಸಂಪರ್ಕಿಸಿ ಪಡೆದುಕೊಳ್ಳಬಹುದು.

27/03/23

ಕುಲಸಚಿವರು

# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025.

**ನ್ಯಾಕ್ 'ಎ' ಶ್ರೇಣಿ ಮಾನ್ಯತೆ**

ದೂರವಾಣಿ ಸಂಖ್ಯೆ : 0836–2222392 ಜಾಲತಾಣ : www.kslu.karnataka.gov.in

ಫ್ಯಾಕ್ಸ್ : 0836–2223392 ಇ–ಮೇಲ್: kslu.registrar@gmail.com


ಸಂಖ್ಯೆ: ಕರಾಕಾವಿ/ಆಡಳಿತ/ಉ.ಗೃ.ಟೆಂ./2603(a) ದಿನಾಂಕ: 27/03/2023

## ದರಸೂಚಿಯ ಷರತ್ತುಗಳು

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಉಪಹಾರ ಗೃಹವನ್ನು ಒಂದು ವರ್ಷದ ಅವಧಿಯವರೆಗೆ ನಡೆಸಿಕೊಂಡು ಹೋಗಲು ಆಸಕ್ತ ವ್ಯಕ್ತಿ / ಹೊಟೇಲ್ /ಫರ್ಮ್‌ಗಳಿಂದ ದರಸೂಚಿಗಳನ್ನು ಆಹ್ವಾನಿಸಲಾಗಿದೆ.

1. ಆಸಕ್ತಿಯುಳ್ಳ ಗುತ್ತಿಗೆದಾರರು ಈ ವಿಶ್ವವಿದ್ಯಾಲಯದ ಆವರಣದಲ್ಲಿರುವ ಉಪಹಾರಗೃಹವನ್ನು ಈ ವಿಶ್ವವಿದ್ಯಾಲಯವು **ನಿಗದಿ ಪಡಿಸಿರುವ ತಿಂಡಿ/ತಿನಿಸುಗಳ ದರಗಳಿಗೆ** ಅನುಗುಣವಾಗಿ ನಡೆಸಿಕೊಂಡು ಹೋಗುವ ಕುರಿತಂತೆ, **ಮಾಸಿಕ ಬಾಡಿಗೆಯನ್ನು ನಮೂದಿಸಿ** ಮೊಹರಬಂದ್ ಲಕೋಟೆಯಲ್ಲಿ ಇಟ್ಟು, ಲಕೋಟೆಯ ಮೇಲೆ ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ ರವರ ಪದನಾಮವನ್ನು ಬರೆದು ದಿನಾಂಕ: 11-04-2023ರ **ಸಾಯಂಕಾಲ: 4.00 ಗಂಟೆಯೊಳಗಾಗಿ** ಈ **ಕಚೇರಿಯಲ್ಲಿ ನೀಡಬೇಕು.** ಅತೀ ಹೆಚ್ಚು ಮಾಸಿಕ ಬಾಡಿಗೆ ಹಾಗೂ ತಿಂಡಿ, ತಿನಸುಗಳಿಗೆ ಕಡಿಮೆ ದರವನ್ನು ನಮೂದಿಸಿದವರಿಗೆ ಗುತ್ತಿಗೆಯನ್ನು ನೀಡಲಾಗುವದು. ಒಂದು ವೇಳೆ ಈ ಕಛೇರಿಗೆ ಸದರ ದಿನಾಂಕ ಹಾಗೂ ವೇಳೆಯ ಒಳಗೆ ಬರಲು ಸಾಧ್ಯವಾಗದಿದ್ದಲ್ಲಿ, ಅಂಚೆಯ ಮುಖಾಂತರ 11–04–2023ರ **ಸಾಯಂಕಾಲ: 4.00** ಗಂಟೆಯೊಳಗೆ ಈ ಕಛೇರಿಗೆ ತಲುಪುವಂತೆ **ನೋಂದಾಯಿತ ಅಂಚೆಯ ಮೂಲಕ** ಕಳುಹಿಸಬೇಕು. ನಿಗದಿತ ದಿನಾಂಕ ಹಾಗೂ ಸಮಯದ ನಂತರ ಬರುವ ದರಸೂಚಿಗಳನ್ನು ಪರಿಗಣಿಸಲಾಗುವುದಿಲ್ಲ.

**ಈ ವಿಶ್ವವಿದ್ಯಾಲಯದ ಉಪಹಾರ ಗೃಹವು ಈ ಕೆಳಗೆ ನಮೂದಿಸಿದ ಸವಲತ್ತುಗಳನ್ನು ಒಳಗೊಂಡಿರುತ್ತದೆ.**

| | | |
|---|---|---|
| 1. | ಉಪಹಾರ ಗೃಹದ ವಿಸ್ತೀರ್ಣ | 245.5 ಚ.ಅಡಿ. |
| 2. | ಉಪಹಾರ ಗೃಹದ ಮುಂದಿನ ಭಾಗದ ಪೋರ್ಟಿಕೋದ ವಿಸ್ತೀರ್ಣ | 1076.25 ಚ.ಅಡಿ |
| 3. | Cooking Platform | 1 ಸಂಖ್ಯೆ |
| 4. | Serving Platform | --- |
| 5. | Washing Platform with water tap | 1 ಸಂಖ್ಯೆ |
| 6. | ನೀರಿನ ಸೌಲಭ್ಯ | One wash basin (one inside wash basin & one outside tap) |
| 7. | ವಿದ್ಯುತ್ ಸೌಲಭ್ಯ | ಉಪಹಾರಗೃಹದ ಒಳಗಡೆ 5 ಟ್ಯೂಬಲೈಟ್, ಫ್ಯಾನ್ ಸೌಲಭ್ಯ ಇರುವದು. |

2. ಈ ಉಪಹಾರ ಗೃಹವನ್ನು ನಡೆಸಿಕೊಂಡು ಹೋಗಲು ಈ ಕೆಳಕಂಡ **ನಿಬಂಧನೆಗಳನ್ನು** ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.

i. ಉಪಹಾರ ಗೃಹದ ಗುತ್ತಿಗೆ ಅವಧಿಯು ಯಶಸ್ವಿ ಗುತ್ತಿಗೆದಾರರು ಈ ಕಚೇರಿಯಲ್ಲಿ ಕರಾರುನಾಮೆಗೆ ಸಹಿ ಮಾಡಿದ ದಿನಾಂಕದಿಂದ **ಒಂದು ವರ್ಷದ** ಅವಧಿಯ ವರೆಗೆ ಮಾತ್ರ ಇರುತ್ತದೆ.

ii. ಯಶಸ್ವಿ ಗುತ್ತಿಗೆದಾರರು **"ಒಂದು ವರ್ಷದ"** ಅವಧಿಯ ಬಾಡಿಗೆ ಮೊತ್ತವನ್ನು ಸಂಪೂರ್ಣವಾಗಿ ಸಂದಾಯ ಮಾಡಿದ ನಂತರವೇ ಉಪಹಾರ ಗೃಹವನ್ನು ಹಸ್ತಾಂತರಿಸಲಾಗುವುದು.

iii. ಈ ಉಪಹಾರ ಗೃಹದ ಆವರಣ ಹಾಗೂ ವಾಶ್ ಬೇಸಿನ್‌ಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಹಾಗೂ ಉಪಹಾರಗೃಹದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವೇತನ ಹಾಗೂ ವೇತನಕ್ಕೆ ಸಂಬಂಧಿಸಿದ ಇತರೆ ಭತ್ಯೆಗಳು ಮತ್ತು ಸಮವಸ್ತ್ರಗಳನ್ನು ಗುತ್ತಿಗೆದಾರರು ತಮ್ಮ ಖರ್ಚಿನಿಂದಲೇ ನೀಡಬೇಕು. ಅಲ್ಲದೇ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು. ಕಾರ್ಮಿಕರಿಗೆ ಸಂಬಂಧಪಟ್ಟ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

iv. ಈ ಉಪಹಾರ ಗೃಹದಲ್ಲಿ ನೀಡಲಾಗುವ ಉಪಹಾರಗಳ ಪ್ರಮಾಣ ಹಾಗೂ ಬೆಲೆಯು, ಈ ಕುರಿತು ಸರ್ಕಾರ/ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ರವರು ಕಾಲಕಾಲಕ್ಕೆ ಸುತ್ತೋಲೆ ಮೂಲಕ ಹೊರಡಿಸಲಾಗುವ ನಿರ್ದೇಶನಗಳ ಮೇರೆಗೆ ಪ್ರಮಾಣ ಹಾಗೂ ಬೆಲೆಗೆ ಸಮಾನವಾಗಿರಬೇಕು.

v. ಈ ವಿಶ್ವವಿದ್ಯಾಲಯದಿಂದ ನಿಗದಿಪಡಿಸಿದ ಉಪಹಾರಗಳ ದರಪಟ್ಟಿಯನ್ನು (ರೇಟ್ ಬೋರ್ಡ್) ಕಡ್ಡಾಯವಾಗಿ ಉಪಹಾರ ಗೃಹದ ಹೊರಗಡೆ ಹಾಗೂ ಒಳಗಡೆ ಬರೆದು ನೇತು ಹಾಕಬೇಕು. ಹಾಗೂ ಈ ವಿಶ್ವವಿದ್ಯಾಲಯದ ಅನುಮೋದನೆಯನ್ನು ಪಡೆಯದೇ ಯಾವುದೇ ಉಪಹಾರಗಳ ಬೆಲೆಯನ್ನು ಬದಲಾಯಿಸುವಂತಿಲ್ಲ.

vi. ಯಶಸ್ವಿ ಟೆಂಡರುದಾರರು ಗ್ರಾಹಕರಿಗೆ **ಶುದ್ಧ ಕುಡಿಯುವ** ನೀರಿಗಾಗಿ water purifier ಅನ್ನು ಕಡ್ಡಾಯವಾಗಿ ಅಳವಡಿಸಬೇಕು.

vii. ಈ ಉಪಹಾರ ಗೃಹವು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸ್ಥಾನಿಕ ಅಭಿಯಂತರರು ಇವರ ಉಸ್ತುವಾರಿಯಲ್ಲಿ ನಡೆಯಬೇಕು.

viii. ಯಶಸ್ವಿ ಟೆಂಡರುದಾರರು ಅವರ ಗುತ್ತಿಗೆ ಅವಧಿಯಲ್ಲಿ ವಿದ್ಯುತ್ ಮತ್ತು ನೀರಿನ ಕರಗಳನ್ನು ಅವರೇ ಸಂದಾಯ ಮಾಡುವುದು.

ix. ಈಗಿರುವ ಡೆಡ್ ಸ್ಟಾಕ್ ಸಾಮಾನುಗಳು ಉಪಹಾರ ಗೃಹದಲ್ಲಿ ಇದ್ದಲ್ಲಿ ಅವುಗಳನ್ನು ಟೆಂಡರುದಾರರು ಉಪಯೋಗಿಸಿಕೊಳ್ಳಬಹುದು. ಇವುಗಳನ್ನು ಪಡೆದುಕೊಳ್ಳುವಾಗ ಯಾದಿ ಮಾಡಿ ಸ್ಥಾನಿಕ ಅಭಿಯಂತರರ ಪರವಾನಿಗೆಯೊಂದಿಗೆ ಪಡೆದುಕೊಳ್ಳಬೇಕು ಹಾಗೂ ಹಿಂದಿರುಗಿಸುವಾಗ ಯಾದಿಯ ಪ್ರಕಾರ ಹಿಂದಿರುಗಿಸಬೇಕು. ಯಾದಿಯ ಪ್ರತಿಯನ್ನು ಸ್ಥಾನಿಕ ಅಭಿಯಂತರರ ಕಚೇರಿಗೆ ಸಲ್ಲಿಸಬೇಕು.

x. ಉಪಾಹಾರ ಗೃಹದ ಕಟ್ಟಡದಲ್ಲಿ ಏನಾದರೂ ಬದಲಾವಣೆ ಮಾಡಬೇಕಾದಲ್ಲಿ ಈ ವಿಶ್ವವಿದ್ಯಾಲಯದ ಅಧಿಕಾರಿಗಳ ಪೂರ್ವಾನುಮತಿಯನ್ನು ಪಡೆದುಕೊಳ್ಳಬೇಕು.

xi. ಯಶಸ್ವಿ ಟೆಂಡರುದಾರರು ತಮ್ಮ ಅವಧಿ ಮುಕ್ತಾಯವಾದ ಕೂಡಲೇ ಯಥಾ ಸ್ಥಿತಿಯಲ್ಲಿಯೇ ಕಟ್ಟಡ ಹಾಗೂ ತಾವು ಪಡೆದುಕೊಂಡ ಸಾಮಾನುಗಳನ್ನು ಸ್ಥಾನಿಕ ಅಭಿಯಂತರರಿಗೆ ಒಪ್ಪಿಸಬೇಕು.

xii. ಯಶಸ್ವಿ ಟೆಂಡರುದಾರರು ಸ್ವತ: ತಾವೇ ಉಪಹಾರ ಗೃಹವನ್ನು ನಡೆಸಿಕೊಂಡು ಹೋಗಬೇಕು.

xiii ಯಶಸ್ವಿ ಟೆಂಡರುದಾರರು ಈ ವಿಶ್ವವಿದ್ಯಾಲಯದ ಉಪಾಹಾರ ಗೃಹವನ್ನು ನಡೆಸುವ ಕುರಿತಂತೆ ಎಲ್ಲ ಕಾನೂನುಬದ್ಧ ನಿಯಮಗಳನ್ನು ಕೈಕೊಳ್ಳುವುದು ಹಾಗೂ ಚಾಲ್ತಿಯಲ್ಲಿದ್ದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದು.

3. ಯಶಸ್ವಿ ಗುತ್ತಿಗೆದಾರರು **ರೂ. 200/-** ಮೌಲ್ಯದ ಛಾಪಾ ಕಾಗದವನ್ನು ತೆಗೆದುಕೊಂಡು ಬಂದು ಈ ವಿಶ್ವವಿದ್ಯಾಲಯದಲ್ಲಿ ಕರಾರುನಾಮೆ ಮಾಡಿಕೊಳ್ಳಬೇಕು. ಕರಾರುನಾಮೆಗೆ ಸಹಿ ಮಾಡುವ ಪೂರ್ವದಲ್ಲಿಯೇ ಒಂದು ವರ್ಷದ ಅವಧಿಯ ಬಾಡಿಗೆಯನ್ನು ಮುಂಗಡವಾಗಿ ಭರಿಸತಕ್ಕದ್ದು ಹಾಗೂ **ರೂ.10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ)** ಗಳ ಹುಂಡಿಯನ್ನು ಹಣಕಾಸು ಅಧಿಕಾರಿಗಳು, ಕರಾಕಾವಿ, ಹುಬ್ಬಳ್ಳಿ ರವರ ಪದನಾಮದಲ್ಲಿ ತೆಗೆದು **ಭದ್ರತಾ ಠೇವಣಿ** ರೂಪದಲ್ಲಿ ಇಡಬೇಕು. ಸದರ ಭದ್ರತಾ ಠೇವಣಿಯನ್ನು ಗುತ್ತಿಗೆ ಅವಧಿಯು ಸಮಾಧಾನಕರವಾಗಿ ಮುಕ್ತಾಯಗೊಂಡ ದಿನಾಂಕದಿಂದ ಒಂದು ತಿಂಗಳ ನಂತರ ಮರಳಿಸಲಾಗುವುದು. ಒಂದು ವೇಳೆ ಈ ವಿಶ್ವವಿದ್ಯಾಲಯದ ಯಾವುದೇ ವಸ್ತು/ಕಟ್ಟಡ ಹಾಗೂ ಇತರೇ ಸಮಾಗ್ರಿಗಳಿಗೆ ಧಕ್ಕೆಯಾದಲ್ಲಿ ಅಥವಾ ಹಾನಿ ಸಂಭವಿಸಿದಲ್ಲಿ ಅದನ್ನು ಭದ್ರತಾ ಠೇವಣಿಯಿಂದ ಕಡಿತಗೊಳಿಸಿ ಮಿಕ್ಕ ಮೊತ್ತವನ್ನು ಮರಳಿಸಲಾಗುವುದು ಹಾಗೂ ಭದ್ರತಾ ಠೇವಣಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

4. ಗುತ್ತಿಗೆದಾರರ ಸೇವೆಯು ತೃಪ್ತಿಕರವಾಗದಿದ್ದಲ್ಲಿ ಅಥವಾ ವಿಶ್ವವಿದ್ಯಾಲಯದ ಘನತೆಗೆ ದಕ್ಕೆಯುಂಟಾಗುವಂತಹ ಸನ್ನಿವೇಶಗಳು ಸಂಭವಿಸಿದಲ್ಲಿ, ಗುತ್ತಿಗೆಯ ಅವಧಿಯನ್ನು ವಜಾಗೊಳಿಸುವ ಹಾಗೂ ಒಂದು ವರ್ಷಕ್ಕೆ ಭರಿಸಿದ ಬಾಡಿಗೆ ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕನ್ನು ಈ ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ.

5. ದರಸೂಚಿಗಳನ್ನು ಯಾವುದೇ ಕಾರಣಗಳನ್ನು ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ.

6. ಯಶಸ್ವಿ ಗುತ್ತಿಗೆದಾರರು, ಅವರ ದರಸೂಚಿಗಳು ಅಂಗೀಕಾರಗೊಂಡಂತೆ ಈ ಕಚೇರಿಯಿಂದ ತಿಳಿಸಲಾಗುವ ದಿನಾಂಕದಿಂದ ಒಂದು ವಾರದ ಒಳಗೆ ಈ ಕಚೇರಿಗೆ ಬಂದು ಕರಾರುನಾಮೆ ಒಪ್ಪಂದಕ್ಕೆ ಸಹಿ ಮಾಡಿ, ಉಪಹಾರ ಗೃಹ ನಡೆಸಿಕೊಂಡು ಹೋಗಲು ಕಾರ್ಯ ಪ್ರವೃತ್ತರಾಗಬೇಕು. ಹೀಗೆ ಕಾರ್ಯ ಪ್ರವೃತ್ತರಾಗದಿದ್ದಲ್ಲಿ ಮತ್ತು ಸಕಾಲದಲ್ಲಿ ಒಡಂಬಡಿಕೆಯನ್ನು ಮಾಡಿಕೊಳ್ಳದಿದ್ದಲ್ಲಿ ಅಂತಹ ಯಶಸ್ವಿ ಗುತ್ತಿಗೆದಾರರ ಬೇಡಿಕೆಯನ್ನು ತಿರಸ್ಕರಿಸಿ ಮುಂದಿನ ಕಡಿಮೆ ಗುತ್ತಿಗೆದಾರರಿಗೆ ಗುತ್ತಿಗೆಯನ್ನು ನೀಡಲಾಗುವುದು.

7. ಯಶಸ್ವಿ ಗುತ್ತಿಗೆದಾರರು ದರಸೂಚಿಯಲ್ಲಿ ನಿಗದಿ ಪಡಿಸಿರುವ ತಿಂಡಿ-ತಿನಿಸುಗಳ ದರಗಳನ್ನು ತೆಗೆದುಹಾಕಿ ಬೇರೆ ದರಗಳನ್ನು ಬದಲಾಯಿಸಲು ಅವಕಾಶ ಇರುವುದಿಲ್ಲ. ಒಂದು ವೇಳೆ ತಿಂಡಿ-ತಿನಿಸುಗಳ ಬೆಲೆಯನ್ನು ಈ ವಿಶ್ವವಿದ್ಯಾಲಯದ ಪೂರ್ವಾನುಮತಿ ಇಲ್ಲದೆ ಏರಿಸಿದಲ್ಲಿ ಅವರ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

8. ಉಪಹಾರ ಗೃಹವನ್ನು ನಡೆಸುವ ಗುತ್ತಿಗೆದಾರರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಿಂದ, ಉಪಹಾರಗೃಹ/ಕ್ಯಾಂಟಿನ್/ಹೊಟೇಲ್ ನಡೆಸಲು ಅನುಮತಿಯನ್ನು ಪಡೆದಿರಬೇಕು. ಸದರಿ ಅನುಮತಿಯನ್ನು ಪಡೆಯದಿದ್ದಲ್ಲಿ ಯಶಸ್ವಿ ಗುತ್ತಿಗೆದಾರರು ಬೇಡಿಕೆಯು ಸ್ವೀಕೃತಿಯಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಅನುಮತಿಯನ್ನು ಪಡೆದು ಸಲ್ಲಿಸಬೇಕು. ಒಂದು ವೇಳೆ ಸಲ್ಲಿಸದಿದ್ದಲ್ಲಿ ಅವರ ಗುತ್ತಿಗೆಯನ್ನು ರದ್ದುಗೊಳಿಸಿ ನಂತರದ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವದು.

9. ಕರಾರು ಒಪ್ಪಂದವಾದ ನಂತರ ಗುತ್ತಿಗೆ ಅವಧಿಯು ಮುಕ್ತಾಯಗೊಳ್ಳುವವರೆಗೂ ಅಥವಾ ಮುಂದಿನ ವ್ಯವಸ್ಥೆಯಾಗುವವರೆಗೂ ಉಪಾಹಾರಗೃಹದ ಒಳಗೆ ಹಾಗೂ ಹೊರಗಡೆ ಶುಚಿತ್ವವನ್ನು ಪಾಲಿಸಿಕೊಂಡು ಬರಬೇಕು ಹಾಗೂ ತಯಾರಿಸುವ ತಿಂಡಿ-ತಿನಿಸುಗಳು, ಪಾನೀಯಗಳು ಒಳ್ಳೆಯ ಗುಣಮಟ್ಟದ್ದಾಗಿರತಕ್ಕದ್ದು, ದೇಹಕ್ಕೆ ಹಾನಿಕಾರಕವಾಗಿರಬಾರದು. ಇದಕ್ಕೆ ತಪ್ಪಿದಲ್ಲಿ ಅವರ ಇಎಂಡಿ (ಭದ್ರತಾ ಠೇವಣಿ) ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇದಲ್ಲದೇ ಈ ವಿಶ್ವವಿದ್ಯಾಲಯವು ವಿಧಿಸಬಹುದಾದ ದಂಡವನ್ನು ಕೂಡ ಪಾವತಿಸಬೇಕಾಗುವುದು.

10. ಗುತ್ತಿಗೆದಾರರು ಎಲ್ಲ ಕಛೇರಿ ಕೆಲಸದ ದಿನಗಳಲ್ಲಿ ಕಡ್ಡಾಯವಾಗಿ ಉಪಹಾರಗೃಹವನ್ನು ತೆರೆಯತಕ್ಕದ್ದು, ಒಂದುವೇಳೆ ಕಾರಣಾಂತರಗಳಿಂದ ಕಛೇರಿ ಕೆಲಸದ ದಿನಗಳಲ್ಲಿ ರಜೆ ಪಡೆಯಬೇಕಾದ ಸಂದರ್ಭ ಬಂದಲ್ಲಿ ಕುಲಸಚಿವರ ಪೂರ್ವಾನುಮತಿ ಪಡೆದು, ಉಪಹಾರಗೃಹವನ್ನು ನಡೆಸಲು ಪರ್ಯಾವಾಗಿ ವ್ಯವಸ್ಥೆಯನ್ನು ಮಾಡಿ ರಜೆ ಮೇಲೆ ತೆರಳತಕ್ಕದ್ದು.

11. ಅವಶ್ಯಕತೆ ಕಂಡುಬಂದಲ್ಲಿ ಗುತ್ತಿಗೆ ಅವಧಿಯನ್ನು 3-4 ತಿಂಗಳುಗಳಷ್ಟು ವಿಸ್ತರಿಸುವ ಅಧಿಕಾರವನ್ನು ಈ ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ.

12. ಒಂದು ವೇಳೆ ಉಪಹಾರಗೃಹದ ತಿಂಡಿಗಳ ಸೇವನೆಯಿಂದ ಈ ವಿಶ್ವವಿದ್ಯಾಲಯದ ಯಾವುದೇ ವ್ಯಕ್ತಿ/ವಿದ್ಯಾರ್ಥಿ/ ಸಿಬ್ಬಂದಿಗಳಿಗೆ ಅನಾರೋಗ್ಯ ಅಥವಾ ಪ್ರಾಣಹಾನಿ ಸಂಭವಿಸಿದ್ದಲ್ಲಿ ಅದಕ್ಕೆ ಉಪಹಾರ ಗೃಹವನ್ನು ನಡೆಸುತ್ತಿರುವ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.

27/03/23

ಕುಲಸಚಿವರು

ಗೆ,

____________________

____________________

____________________

<u>ಪ್ರತಿಯನ್ನು:</u>

1. ವಿಶೇಷಾಧಿಕಾರಿಗಳು, ಮಾನ್ಯಕುಲಪತಿಗಳ ಕಾರ್ಯಾಲಯ, ಕರಾಕಾವಿ, ನವನಗರ, ಹುಬ್ಬಳ್ಳಿ
2. ಹಣಕಾಸು ಅಧಿಕಾರಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ ರವರ ಮಾಹಿತಿಗಾಗಿ.
3. ಕುಲಸಚಿವರು (ಮೌಲ್ಯಮಾಪನ) ರವರ ಆಪ್ತ ಕಾರ್ಯದರ್ಶಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ಅವರ ಕಾರ್ಯಾಲಯದ ನೋಟೀಸ್ ಬೋರ್ಡ್‌ಗೆ ಒಂದು ಪ್ರತಿಯನ್ನು ಅಂಟಿಸಲು.
4. ಸ್ಥಾನಿಕ ಅಭಿಯಂತರರು, ಕರಾಕಾವಿ, ನವನಗರ, ಹುಬ್ಬಳ್ಳಿ
5. ಐ.ಸಿ.ಟಿ. ಮುಖ್ಯಸ್ಥರು ಈ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಹಾಕಲು ಕೋರಿದೆ.
6. ವಿಶ್ವವಿದ್ಯಾಲಯದ ನೋಟೀಸ್ ಬೋರ್ಡ್‌ಗೆ ಒಂದು ಪ್ರತಿಯನ್ನು ಅಂಟಿಸಲು.

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಉಪಹಾರಗೃಹದ ತಿಂಡಿ ಪದಾರ್ಥಗಳ ಪ್ರಮಾಣ ಹಾಗೂ ದರಗಳು

| ಕ್ರ.ಸಂ. | ತಿಂಡಿ/ತಿನಿಸು/ಪಾನೀಯಗಳು | ತಿಂಡಿ/ತಿನಿಸು/ ಪಾನೀಯಗಳ ಪ್ರಮಾಣ | ತಿಂಡಿ/ತಿನಿಸು/ಪಾನೀಯ ಗಳ ದರ ರೂ.ಗಳಲ್ಲಿ | ಗುತ್ತಿಗೆದಾರರು ತಿಂಡಿ/ತಿನಿಸು/ಪಾನೀಯಗಳಿಗೆ ನಿಗದಿಪಡಿಸಬಹುದಾದ ದರಗಳು |
|---|---|---|---|---|
| 1 | ಚಹಾ | ಅರ್ಧ | 5=00 | |
| 2 | ಚಹಾ | 1 ಕಪ್ | 10=00 | |
| 3 | ಕೆ.ಟಿ. | 1 ಕಪ್ | 10=00 | |
| 4 | ಕಾಫಿ | 1 ಕಪ್ | 10=00 | |
| 5 | ಹಾಲು | 1 ಕಪ್ | 12=00 | |
| 6 | ಬೋರ್ನ್‌ವಿಟಾ | 1 ಕಪ್ | 15=00 | |
| 7 | ಇಡ್ಲಿ – ಸಿಂಗಲ್ | 01 | 8=00 | |
| 8 | ಇಡ್ಲಿ – ಪ್ಲೇಟ್ | 02 | 15=00 | |
| 9 | ವಡಾ – ಸಿಂಗಲ್ | 01 | 15=00 | |
| 10 | ವಡಾ – ಪ್ಲೇಟ್ | 02 | 30=00 | |
| 11 | ಉಪ್ಪಿಟ್ಟು | 1 ಪ್ಲೇಟ್ | 15=00 | |
| 12 | ಅವಲಕ್ಕಿ ಚೂಡಾ | 1 ಪ್ಲೇಟ್ | 15=00 | |
| 13 | ಮಂಡಕ್ಕಿ ಚೂಡಾ | 1 ಪ್ಲೇಟ್ | 15=00 | |
| 14 | ಶಿರಾ | 1 ಪ್ಲೇಟ್ | 15=00 | |
| 15 | ಪೂರಿ – ಸಿಂಗಲ್ | 02 | 15=00 | |
| 16 | ಪೂರಿ – ಪ್ಲೇಟ್ | 04 | 25=00 | |
| 17 | ಗೋಲ ಬಜಿ – ಸಿಂಗಲ್ | 02 | 10=00 | |
| 18 | ಗೋಲ ಬಜಿ – ಪ್ಲೇಟ್ | 04 | 20=00 | |
| 19 | ಮಿರ್ಚಿ–ಸಿಂಗಲ್ | 01 | 10=00 | |
| 20 | ಮಿರ್ಚಿ–ಪ್ಲೇಟ್ | 02 | 20=00 | |
| 21 | ಮೊಸರ ವಡಾ | 1 ಪ್ಲೇಟ್ | 20=00 | |
| 22 | ಬಜಿ | 1 ಪ್ಲೇಟ್ (4) | 20=00 | |
| 23 | ಮಸಾಲಾ ದೋಸಾ | 01 | 20=00 | |
| 24 | ಸೆಟ್ ದೋಸಾ | 1 ಪ್ಲೇಟ್ (3) | 30=00 | |
| 25 | ಉತ್ತಪ್ಪಾ | 1 ಪ್ಲೇಟ್ | 25=00 | |
| 26 | ಫಲಾವ್, ರಾಯತಾ | 1 ಪ್ಲೇಟ್ | 20=00 | |
| 27 | ಊಟ (2 ಚಪಾತಿ, 2 ತರಾ ಪಲ್ಲೆ, ಮೊಸರು, ಚಟ್ನಿ, ಉಪ್ಪಿನಕಾಯಿ, ರೈಸ್ ಸಾಂಬಾರ್) | – | 50=00 | |
| 28 | ರೈಸ್, ಸಾಂಬಾರ್, ಉಪ್ಪಿನಕಾಯಿ, 1 ಪಲ್ಲೆ, ಮೊಸರು | – | 25=00 | |
| 29 | 2 ಚಪಾತಿ, ಭಾಜಿ ಪ್ಲೇಟ್, ಉಪ್ಪಿನಕಾಯಿ, ಮೊಸರು | – | 25=00 | |

ದಿನಾಂಕ:
ಸ್ಥಳ:

ಫರ್ಮ/ಸಂಸ್ಥೆಯ
ಮೊಹರಿನೊಂದಿಗೆ ಸಹಿ